ಹೋಗುತ್ತಿದೆ. ಒಂದು ಗೊಣಗಾಟ ಇಲ್ಲ, ಸಿಟ್ಟು–ಶಡ ಇಲ್ಲ. ಕತ್ತೆಯ ಹಾಗೆ ದುಡಿಯುತ್ತದೆ. ಅದು ಬೇಕು ಇದು ಬೇಕು ಎಂದು ಒಂದು ದಿನವೂ ಹೇಳಿದವಳಲ್ಲ. ಮಗ ರಾಮಯ್ಯನಿಗೆ ಬುದ್ಧಿ ಇಲ್ಲ. ಇಂತಹ ಚಿನ್ನದಂತಹ ಹೆಂಡತಿಯನ್ನು ಬಾಳಿಸುವ ಅದೃಷ್ಟ ಇಲ್ಲದೇ ಊರುಬಿಟ್ಟು ಹೋದನಲ್ಲ. ಎಲ್ಲಿ ಇದ್ದಾನೋ ಏನೋ. ಮಗನ ನೆನಪು ಆಗುತ್ತಿದ್ದಂತೆ ವೆಂಕಮ್ಮನಿಗೆ ಗಂಟಲು ಒತ್ತಿ ಬಂತು. ತಾನು ಸಾಯುವುದರ ಒಳಗೆ ಈ ಹೆಣ್ಣಿಗೊಂದು ನೆಲೆ ಕಾಣಿಸಬೇಕು. ಮಗನನ್ನು ಎಲ್ಲಿಯಾದರೂ ಹುಡುಕಿಸಿ ತರಬೇಕು. ಮದುವೆಯ ಮನೆಯಲ್ಲಿ ಯಾರಿಗಾದರೂ ಅವನ ಸುದ್ದಿ ತಿಳಿದಿದ್ದರೆ ಒಳ್ಳೆಯದಾಯಿತು. ಹುಡುಕುತ್ತಿರುವ ಬಳ್ಳಿ ಕಾಲಿಗೆ ಸಿಕ್ಕಿದಂತೆ. ವೆಂಕಮ್ಮ ನಡೆಯುವ ವೇಗವನ್ನು ಹೆಚ್ಚಿಸಿದರು.

ತೋಟದ ಮಧ್ಯದಲ್ಲಿರುವ ದೊಡ್ಡ ಮದುವೆಯ ಮನೆಯ ಮುಂದಿನ ದೊಡ್ಡ ಅಂಗಳದಲ್ಲಿ ಮಡಲಿನ ಚಪ್ಪರವನ್ನು ಸುತ್ತ ದಿಡಕಿಯನ್ನು ಹಾಕಿದ್ದರು. ಎದುರಿಗೇ ಮಾವಿನ ಎಲೆಯ ತೋರಣ. ಚಪ್ಪರದ ಒಳಗೆ ಒಂದು ಬದಿಯಲ್ಲಿ ಮಂಟಪವನ್ನೂ ಕಟ್ಟಿದ್ದರು. ಹಿಂದೆ ಒಂದು ಜಮಖಾನವನ್ನು ಕಟ್ಟಿ ಸೇವಂತಿಗೆ ಹೂವಿನಹಾರವನ್ನು ಮೇಲಿನಿಂದ ಇಳಿಬಿಟ್ಟು ಅಲಂಕರಿಸಿದ್ದರು. ಮಂಟಪದ ನಾಲ್ಕೂ ದಿಕ್ಕಿನಲ್ಲಿ ಕಂಬವನ್ನು ಹೊಯಿಗೆಯ ಡಬ್ಬದಲ್ಲಿ ಹುಗಿದು ಬಾಳೆಯ ದಿಂಡನ್ನು ಆ ಕಂಬಗಳಿಗೆ ಕಟ್ಟಿ ಮೇಲಿನಿಂದ ಸುತ್ತಲೂ ಮಾವಿನ ಎಲೆಯ ತೋರಣವನ್ನು ಮಾಡಿ ಸಿಂಗರಿಸಿದ್ದರು. ಮನೆಯ ಹೆಬ್ಬಾಗಿಲಿನ ಎರಡೂ ಬದಿಯಲ್ಲಿ ಎರಡು ಕಂಬಗಳನ್ನು ಊರಿ ಅದಕ್ಕೂ ಎಳೆಯ ಮಾವಿನಕುಡಿಯ ತುಂಡನ್ನು ಹಗ್ಗದಲ್ಲಿ ಕಟ್ಟಿ ಸುತ್ತಿ ಹಾರದಂತೆ ಮಾಡಿ ಅಲಂಕರಿಸಿದ್ದರು. ಚಪ್ಪರದಲ್ಲಿ ಅಲ್ಲಲ್ಲಿ ಬಣ್ಣಬಣ್ಣದ ಬಲೂನ್‌ಗಳನ್ನು ನೇತುಹಾಕಿ ಕಟ್ಟಿದ್ದು ಅವು ಗಾಳಿಯಲ್ಲಿ ಓಲಾಡುತ್ತಿದ್ದವು. ಮನೆಯಲ್ಲಿ ಎಲ್ಲರೂ ಸಂಭ್ರಮದಿಂದ ಓಡಾಡುತ್ತಿದ್ದರು. ವೆಂಕಮ್ಮನನ್ನು ಕಂಡ ಒಬ್ಬರು 'ಬನ್ನಿ ಬನ್ನಿ. ಬಹಳ ಅಪರೂಪ' ಎಂದು ಕರೆದು ಕುಳ್ಳಿರಿಸಿ, ಉಪಚಾರ ಮಾಡಿ ಕುಡಿಯಲು ಪಾನಕವನ್ನು ಕೊಟ್ಟರು. ವೆಂಕಮ್ಮ ಪಾನಕ ಕುಡಿದು ಪ್ರಯಾಣ ಮಾಡಿ ಆದ ದಣಿವನ್ನು ಪರಿಹರಿಸಿಕೊಂಡರು.

ನಂತರ ವೆಂಕಮ್ಮನೂ ಖುಷಿಯಿಂದ ಮನೆಯವರೊಂದಿಗೆ ಬೆರೆತು ಗುರುತಿನವರನ್ನೆಲ್ಲ ಕಂಡು ಹೋಗಿ ಹೋಗಿ ಮಾತಾಡಿಸಿದರು. ಸಂಭ್ರಮಪಟ್ಟರು.

ಮದುವೆ ಶಾಸ್ತ್ರಗಳೆಲ್ಲ ಮುಗಿದವು. ಊಟವೂ ಆಯಿತು. ವೆಂಕಮ್ಮ ಒಂದು ಬದಿಯಲ್ಲಿ ಕುಳಿತು ಯಾರ ಹತ್ತಿರವೋ ಮಗನ ವಿಷಯ ಹೇಳಿಕೊಂಡು ಅವನನ್ನು ಹುಡುಕಿಸುವ ವಿಷಯದ ಬಗ್ಗೆ ಮಾತಾಡುತ್ತಿದ್ದರು.

ಆಗ ಸೀತಾರಾಮಯ್ಯ, 'ಅತ್ತೆ, ಸ್ವಲ್ಪ ಇಲ್ಲಿ ಬನ್ನಿ' ಎಂದು ಕರೆದ. ಹಿರಿಯರಾದ ವೆಂಕಮ್ಮ ಏನೋ ಶಾಸ್ತ್ರದ ಬಗ್ಗೆ ಕೇಳಲಿಕ್ಕಿದೆಯೋ ಎಂದು ದಡಕ್ಕನೇ ಎದ್ದು ಲಗುಬಗೆಯಿಂದ ಬಂದು, 'ಎಂತ ಮಾರಾಯಾ? ಎಲ್ಲಾ ಮುಗೀತಲ್ಲ. ಇನ್ನೇನು' ಎನ್ನುತ್ತಾ ಅವನು ಇದ್ದಲ್ಲಿಗೆ ಹೋದರು. ಅವನ ಮುಖ ವ್ಯಗ್ರವಾಗಿತ್ತು. ವೆಂಕಮ್ಮ ಹತ್ತಿರ ಬರುತ್ತಲೇ, 'ಅತ್ತೆ ನೀವು ಆಗ ಕೋಣೆಗೆ ಹೋದ್ರಲ್ಲ, ಅಲ್ಲಿ ಸರಸು ಒಂದು ಉಂಗುರ ಇಟ್ಟಿದ್ಲಂತೆ ಈಗ ಕಾಣ್ತಾ ಇಲ್ಲ. ನೀವು ತೆಗೆದ್ರಾ?' ಎಂದ. ವೆಂಕಮ್ಮ ಬಾಯಿ ತೆರೆಯುವಷ್ಟರಲ್ಲೆ, 'ಈ ನಾಟಕ ಸಾಕು ಅತ್ತೆ, ಎಲ್ಲಿ ನಮ್ಮ ಆ ಉಂಗುರ ಕೊಟ್ಟುಬಿಡಿ' ಅಂದ. ವೆಂಕಮ್ಮನಿಗೆ ಏನು ಎಂದು ಅರ್ಥವಾಗುವುದರ ಒಳಗೆ ಅವನು 'ಊಂ' ಎಂದು ಗುಟುರು ಹಾಕಿದ. 'ನಂಗೆ ಗೊತ್ತಿತ್ತು ನೀವೇ ತಗಂಡದ್ದು. ನಿಮ್ಮ ಸ್ವಭಾವ ನನಗೆ ಚೆನ್ನಾಗಿ ಗೊತ್ತು. ನೀವು ಆ ಕೋಣೆಗೆ ಹೋದದ್ದು ನಾನು ನೋಡಿದ್ದೇನೆ. ಆ ಉಂಗುರ ಇಟ್ಟಲ್ಲಿ